ಯಾರು, ಎಲ್ಲಿಂದ ಬಂದ್ರು ಎಂದು ಗೊತ್ತಾಗುವುದಿಲ್ಲ. ರೆವಿನ್ಯೂ ಜಾಗದಲ್ಲಿ ಕೂಡ ಇದನ್ನು ಮಾಡಿ ಮುಗಿಸುವಂಥಾದ್ದಲ್ಲ. ಅದು ಈ ಶತಮಾನದಲ್ಲಿ ಕೂಡ ಮುಗಿಯುವುದಿಲ್ಲ..

ಶ್ರೀ ವಾಟಾಳ್ ನಾಗರಾಜ್ : ಶತಮಾನ ಕಳೆದರೂ ಕೂಡ ನೀವು ನಿವೇಶನ ಕೊಡುವುದಕ್ಕೆ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಇದನ್ನು ಕೊಟ್ಟನೆ ನೀವು ದೊಡ್ಡ ಯಾಗ ಮಾಡಿದಹಾಗೆ.

ಶ್ರೀ ಎಸ್. ಬಂಗಾರಪ್ಪ : ಆನಂತರ 85-86 ಸಾವಿರ ಚಿಲ್ಲರೆ ಜನಕ್ಕೆ ಸೈಟುಗಳನ್ನು ಕೊಡಬೇಕು ಎಂಬುದು. ಅಂದರೆ ಅಲ್ಲಿಗೆ ಹೆಚ್ಚುಕಡಿಮೆ ಅಷ್ಟು ಜನ ಸೈಟ್‌ಲೆಸ್ ಜನ ಇದ್ದಾರೆ ಎಂದು ನಮಗೆ ಅರ್ಥವಾಗುತ್ತದೆ. ಇದಕ್ಕೆ ಏನಾದರೂ ಮಾಡಬೇಕು ಎಂದರೆ, ನಾವು ಸೈಟುಗಳನ್ನು ತೆಗೆದುಕೊಂಡು ಹೋಗಬೇಕು. ತಾವು ಹೇಳಿದಿರಿ ಜಾಗ ರೆಡಿ ಮಾಡಿಕೊಂಡು ಅಪ್ಲಿಕೇಶನ್ಸ್ ಕರೆಯುವುದು ಒಳ್ಳೆಯದು ಎಂದು. ನಾವು ಇದನ್ನು ಮಾಡಬೇಕಾದರೆ ಹಣರೆಡಿ ಮಾಡಿಕೊಂಡು, ಜಾಗ ಅಕ್ವೈರ್ ಮಾಡಿಕೊಂಡು ಹೋಗಬೇಕಾಗುತ್ತದೆ. ಈ ಯೋಚನೆ ಆ ಕಾಲದಲ್ಲಿ ಏಕೆ ಮಾಡಿದ್ದಾರೆ ಎಂದರೆ, ಹಣ ಏನು ಬರುತ್ತದೆ, ಆ ಹಣದಿಂದಲೇ ಜಾಗ ತೆಗೆದುಕೊಂಡು ಆಮೇಲೆ ಸೈಟು ಕೊಡಬೇಕೆನ್ನುವ ಯೋಚನೆಯಿಂದ ಮಾಡಿದ್ದಾರೆ. ಆದ್ದರಿಂದ ಅದರಲ್ಲಿ ಅರ್ಥ ಇದೆ. ಅದು ತಪ್ಪು ಎನ್ನತಕ್ಕಂಥ ದೃಷ್ಟಿಯಿಂದ ಅಲ್ಲ. ಅದೇನೇ ಇರಲಿ, ಈಗ ಇರತಕ್ಕಂಥವರಿಗೆ ಕೊಟ್ಟು ಉಳಿದವರಿಗೆ ಜೀರೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವೇ, ನಿಮ್ಮ ಪ್ರಶ್ನೆ: 2633ಕ್ಕೆ ಟೈಮ್ ಬೇಕು ಎಂದು ಕೇಳಿದ್ದಾರೆ. ಎರಡು ವಾರಗಳ ಟೈಮ್ ಕೇಳಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಗಳನ್ನು ಏನು ಕೇಳುತ್ತೇನೆ, ಅವುಗಳಿಗೆ ಯಾವಾಗಲೂ ಸಮಯಕ್ಕೆ ಸರಿಯಾಗಿ ಉತ್ತರ ಬರುತ್ತಿಲ್ಲ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರಗಳಾಗಲೀ, ಮಹತ್ವಪೂರ್ಣವಾದಂಥ ವಿಚಾರಗಳಾಗಲೀ, ಅವುಗಳನ್ನು ಕೇಳಿದಂಥ ಸಂದರ್ಭದಲ್ಲಿ ಇಲ್ಲಿ ಎಲ್.ಎ. ಪ್ರಶ್ನೆಗಳೂ ಬರುವುದಿಲ್ಲ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಾಗಿಯೂ ಉತ್ತರ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಅತಿ ಶೀಘ್ರವಾಗಿ ಕಳುಹಿಸಿ ಉತ್ತರ ತರಿಸತಕ್ಕ ಪ್ರಯತ್ನ ಮಾಡುತ್ತೇವೆ. ಅದು ಶೀಘ್ರವಾಗಿ ಮುಂಚೆಯೇ ಬಂದರೆ, ಅದನ್ನು ತಮಗೆ ಕಳಿಸಿ ಕೊಟ್ಟುಬಿಡುತ್ತೇವೆ.

ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಸಂಖ್ಯೆ.

2705 - ಶ್ರೀ ಪಿ.ಜಿ. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಒಟ್ಟು ಸಂಖ್ಯೆ ಎಷ್ಟು ? ಇವರುಗಳು ಯಾವ ಯಾವ ಬಂಧೀಖಾನೆಯಲ್ಲಿ ಇರುವರು ಮತ್ತು ಅವರ ಸಂಖ್ಯೆ ಎಷ್ಟು ?

ಆ) ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಖೈದಿಗಳಲ್ಲಿ ಹತ್ತು ವರ್ಷಗಳನ್ನು ಕಳೆದಿರುವರ ಸಂಖ್ಯೆ ಎಷ್ಟು? ಅವರಲ್ಲಿ ಎಷ್ಟು ಜನ ಉತ್ತಮ ನಡತೆಗಾಗಿ ಬಿಡುಗಡೆ ಹೊಂದಲು ವಿನಂತಿಯನ್ನು ಸರ್ಕಾರಕ್ಕೆ ಮಾಡಿಕೊಂಡಿದ್ದಾರೆ?

ಇ) ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಕೇಂದ್ರ ಸರ್ಕಾರವು 1978ರ ನಂತರ ತಂದಿರುವ 433 'ಎ' ನಿಯಮದ ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು? ತಿದ್ದುಪಡಿ ನಿಯಮ ಜಾರಿಗೆ ಬಂದ ನಂತರ ಜೀವಾವಧಿ ವಿನಂತಿ ಅರ್ಜಿಗಳು ಇತ್ಯರ್ಥವಾಗದೆ ಉಳಿದಿರುವ ಸಂಖ್ಯೆ ಎಷ್ಟು ?

ಈ) ಕ್ರಿಮಿನಲ್ ಪ್ರೊಸೀಜರ್ ಕೋಡ್ ನಿಯಮ : 432 ಮತ್ತು 433 ಮಾತ್ರವೇ ಸರ್ಕಾರ ಇಲಾಖಾಧಿಕಾರಿಗಳು ಜಾರಿಯಲ್ಲಿರುವ ಬಗ್ಗೆ ಸರ್ಕಾರದ ಧೋರಣೆ ಏನು?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹರಕ್ಷಕ ದಳ, ರಾಜ್ಯ ಸಚಿವರು) :

ಅ) ದಿನಾಂಕ 15-8-1991ರವರೆಗೆ ಸಂಖ್ಯೆ : 779. (ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ)

ಆ) 242 ಮತ್ತು 96 ಖೈದಿಗಳು ಬಿಡುಗಡೆಗೆ ವಿನಂತಿ ಮಾಡಿದ್ದಾರೆ.

ಇ) ಭಾರತ ದಂಡ ಪ್ರಕ್ರಿಯ ಸಂಹಿತೆಯ 433(ಎ) ನಿಯಮದ ತಿದ್ದುಪಡಿಯ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ಅನುಬಂಧ

ರಾಜ್ಯದಲ್ಲಿ ವಿವಿಧ ಬಂಧೀಖಾನೆಗಳಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ವಿವರ

			ಗಂ	ಹೆಂ	ಒಟ್ಟು
1)	ಕೇಂದ್ರ ಕಾರಾಗೃಹ,	ಬೆಂಗಳೂರು	206	12	218
2)	ಕೇಂದ್ರ ಕಾರಾಗೃಹ,	ಬೆಳಗಾಂ	228	04	232
3)	ಕೇಂದ್ರ ಕಾರಾಗೃಹ,	ಬಳ್ಳಾರಿ	34	01	35
4)	ಕೇಂದ್ರ ಕಾರಾಗೃಹ,	ಬಿಜಾಪುರ	53	00	53
5)	ಕೇಂದ್ರ ಕಾರಾಗೃಹ,	ಗುಲ್ಬರ್ಗಾ	110	03	113
6)	ಕೇಂದ್ರ ಕಾರಾಗೃಹ,	ಮೈಸೂರು	65	02	67
7)	ಕೇಂದ್ರ ಕಾರಾಗೃಹ,	ಶಿವಮೊಗ್ಗ	1	00	01
8)	ಕೇಂದ್ರ ಕಾರಾಗೃಹ,	ಚಿತ್ರದುರ್ಗ	1	00	01
9)	ಕೇಂದ್ರ ಕಾರಾಗೃಹ,	ಧಾರವಾಡ	20	00	20
10)	ಕೇಂದ್ರ ಕಾರಾಗೃಹ,	ಕೋರಮಂಗಲ	39	00	39
	ಒಟ್ಟು		**757**	**22**	**779**

ಶ್ರೀ ಎಚ್. ವಿಶ್ವನಾಥ್ : ಈ ಸಮಾಜದ ವ್ಯವಸ್ಥೆಯ ವಿಷವರ್ತುಲದಲ್ಲಿ ಸಿಲುಕಿ ಈ ರಾಜ್ಯದಲ್ಲಿ ಸುಮಾರು 757 ಜನರು ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಇವರಲ್ಲಿ ಬಹಳಷ್ಟು ಜನ ಅಮಾಯಕರು ಕೂಡ ಇದ್ದಾರೆ. ಇಷ್ಟು ಜನರಲ್ಲಿ ಸುಮಾರು 242 ಜನ ಈಗಾಗಲೇ 10 ವರ್ಷಗಳ ಅವಧಿಯನ್ನು

ಮುಗಿಸಿ ತಮ್ಮ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಇವರಲ್ಲಿ 22 ಜನ ಹೆಣ್ಣುಮಕ್ಕಳು ಸಹ ಇದ್ದಾರೆ.

1.10 ಪಿ.ಎಂ.

10 ವರ್ಷ ಅವಧಿ ಮುಗಿಸಿ, ತಮ್ಮ ಬಿಡುಗಡೆಗಾಗಿ ಅವರು ಅರ್ಜಿಯನ್ನು ಸಲ್ಲಿಸಿದರೂ ಸಹ, ಇದುವರೆಗೂ ಆ ಅರ್ಜಿಯನ್ನು ಪರಾಮರ್ಶೆ ಮಾಡುವುದಕ್ಕೆ ಹೋಗದೇ ಇರತಕ್ಕಂಥಾದ್ದು, ಶೋಚನೀಯವಾದ ವಿಚಾರ. ಆದ್ದರಿಂದ ನಾನು ಸಚಿವರಲ್ಲಿ ಕೇಳುತ್ತೇನೆ. 242 ಜನರಲ್ಲಿ 10 ವರ್ಷ ಅವಧಿ ಮುಗಿಸಿದವರನ್ನು ತಾವು ಯಾವಾಗ ಬಿಡುಗಡೆ ಮಾಡುತ್ತೀರಿ ಮತ್ತು ಬಿಡುಗಡೆ ಆದವರಿಗೆ ಪುನರ್ ವ್ಯವಸ್ತೆ ಕಲ್ಪಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತಾವು ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಅಧ್ಯಕ್ಷರೇ, ಇದು ವಿಶ್ವನಾಥರವರ ಪ್ರಶ್ನೆ ಒಂದೇ ಅಲ್ಲ. ಸುಮಾರು ಜನ ಶಾಸಕರು, ಬೇರೆ ರಾಜ್ಯದವರು, ನಮ್ಮ ರಾಜ್ಯದವರು ಎಲ್ಲರೂ ಇದರ ಬಗ್ಗೆ ಯೋಚನೆ ಮಾಡುವಂಥ ವಿಚಾರ. 1978ರ ಹಿಂದೆ ಇದರ ಬಗ್ಗೆ ಏನಾದರೂ ತೀರ್ಮಾನ ಮಾಡಬಹುದಿತ್ತು. 1978 ಆದಮೇಲೆ, ಸರ್ಕಾರದವರು ಏನಾದರೂ ತೀರ್ಮಾನ ಮಾಡಬೇಕೆಂದು ಹೇಳಿ, 9-4-91ರಂದು ಈ ವಿಚಾರದಲ್ಲಿ ಸಚಿವ ಸಂಪುಟದ ಸಭೆಯಲ್ಲಿ 14 ವರ್ಷದಿಂದ 10 ವರ್ಷಕ್ಕೆ ಮಾಡಬೇಕೆಂದು ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ಇದಕ್ಕೆ ತಿದ್ದುಪಡಿ ತರಬೇಕೆಂದು ಆಲೋಚನೆ ಮಾಡಿ, ಅದನ್ನು ಲಾ ಡಿಪಾರ್ಟ್‌ಮೆಂಟ್‌ಗೂ ಕಳುಹಿಸಿದ್ದು ಅವರೂ ಕೂಡ ಅಪ್ರೂವಲ್ ಮಾಡಿದ್ದಾರೆ. ಸಧ್ಯದಲ್ಲಿಯೇ ಅದು ಇಲ್ಲಿಯೂ ಬರುತ್ತದೆ. ಇಲ್ಲಿ ಅಪ್ರೂವಲ್ ಮಾಡಿ ಮತ್ತೆ ಡೆಲ್ಲಿಗೆ ಕಳುಹಿಸಿಕೊಡಬೇಕಾಗುತ್ತದೆ. ಡೆಲ್ಲಿಯವರು ಆದಷ್ಟು ಬೇಗ ಒಪ್ಪಿಗೆ ಕೊಟ್ಟನಂತರ, ನಾವು ಇದರ ಬಗ್ಗೆ ತೀರ್ಮಾನ ಮಾಡಬಹುದೇ ಹೊರತು, ಸದ್ಯಕ್ಕೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಒಂದು ಮಾತ್ರ ಮಾಡಬಹುದು. ನಿಯಮ 161ರ ಪ್ರಕಾರ, ಗವರ್ನರ್‌ಗೆ ಮಾತ್ರ ಅವಕಾಶ ಇದೆ. ಇದು ರಾಷ್ಟ್ರದಲ್ಲಿ ಎಲ್ಲೂ ಆಗಿಲ್ಲ. ಕೇರಳದಲ್ಲಿ ಮಾಡಿಕೊಂಡು ಸುಮಾರು 200 ಜನರನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಈ ವಿಚಾರವನ್ನೂ ಕೂಡ ಕೇಂದ್ರದ ಜೊತೆ ಚರ್ಚೆ ಮಾಡಿದ್ದೇವೆ. ಮೊನ್ನೆ ಡೆಲ್ಲಿಗೆ ಹೋದಾಗ, ಮಾನ್ಯ ಕುಮಾರ ಮಂಗಳಂ ಹತ್ತಿರ ಚರ್ಚೆ ಮಾಡಿದ್ದೇವೆ, ಅವರೂ ಕೂಡ ಪ್ರಸ್ತಾವ ಕಳುಹಿಸಿ ಎಂದು ಹೇಳಿದ್ದಾರೆ. ಈಗಾಗಲೇ ಡ್ರಾಫ್ಟ್ ಮಾಡಿ ಇಟ್ಟಿದ್ದೇವೆ. ಅದನ್ನು ಇಲ್ಲಿ ತರುತ್ತೇವೆ, ಮತ್ತೆ ಅದನ್ನು ಡೆಲ್ಲಿಗೆ ಕಳುಹಿಸಿ, ಆದಷ್ಟು ಜರೂರಾಗಿ, ಅವರಿಗೆ ಏನು ಕಳಕಳಿ ಇದೆ, ಅದಕ್ಕೆ ವ್ಯವಸ್ಥೆ ಮಾಡುತ್ತೇವೆ. ಬಿಡುಗಡೆಯಾದ ನಂತರ ಪುನರ್ ವಸತಿ ಬಗ್ಗೆ ಚಿಂತನೆ ಮಾಡೋಣ.

ಶ್ರೀ ಎಚ್. ವಿಶ್ವನಾಥ್ : ನನಗೆ ಗೊತ್ತಿರುವ ಹಾಗೆ ಸರ್ಕಾರಕ್ಕೆ ಹಕ್ಕಿದೆ ಎಂದು ತಿಳಿದಿರುತ್ತೇನೆ. ತಾವು ಹೇಳಿದಿರಿ, ರಾಜ್ಯಪಾಲರಿಗೆ ಇದೆ ಎಂದು. ಹಾಗಾದರೆ ರಾಜ್ಯಪಾಲರಿಗೆ ಇಂತಹ ಶಿಫಾರಸನ್ನು ಕಳುಹಿಸಿದ್ದೀರಾ, ಈ ಬಿಡುಗಡೆಗಾಗಿ ಕಳುಹಿಸಿದ್ದರೆ, ಯಾವಾಗ ಕಳುಹಿಸಿದ್ದೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ರಾಜ್ಯಪಾಲರಿಗೆ ಇದುವರೆಗೂ ಯಾವುದನ್ನೂ ಕಳುಹಿಸಿಲ್ಲ. ತಿದ್ದುಪಡಿಯನ್ನು ತರಬೇಕೆಂದು ತೀರ್ಮಾನ ಈಗಾಗಲೇ ಮಾಡಿದ್ದೇವೆ. ಇಲ್ಲಿ ತಿದ್ದುಪಡಿ ತಂದರೂ, ಇದು ಕೇಂದ್ರದಲ್ಲಿ ಆಗಬೇಕು. ಈ ವಿಚಾರದಲ್ಲಿ ಕೇಂದ್ರಕ್ಕೂ ನಮಗೂ ಸಂಬಂಧ ಇದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಹಿಂದೆ ಈ ಪ್ರಶ್ನೆಯನ್ನು ಕೇಳಿದಾಗ, ಮಾನ್ಯ ಮಂತ್ರಿಗಳು ಡಾ. ಅಂಬೇಡ್ಕರ್ ಜನ್ಮಶತಾಬ್ದಿಯ ದ್ಯೋತಕವಾಗಿ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆ ಕಾರಣ, ಈ ವಿಚಾರಕ್ಕಾಗಿ ಹೇಳುತ್ತೇನೆ. ಡಾ. ಅಂಬೇಡ್ಕರ್ ಜನ್ಮಶತಾಬ್ದಿಗಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ..

ಶ್ರೀ ಡಿ.ಕೆ. ಶಿವಕುಮಾರ್ : ಅದೇ ಪ್ರಕಾರ, ಈಗಾಗಲೇ ೧೧ ಜನರನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಂ.ಪಿ. ವೆಂಕಟೇಶ್ : ಪ್ರತಿಯೊಂದು ಜಿಲ್ಲೆಯಲ್ಲೂ ಬಂಧೀಖಾನೆ ಸಮಿತಿ ಎಂದು ಇರುತ್ತದೆ. ಆ ಸಮಿತಿಯಲ್ಲಿ ಖೈದಿಗಳು ಅರ್ಜಿ ಹಾಕಿಕೊಂಡಿರುತ್ತಾರೆ. ಸಮಿತಿಯವರು ಈ ಅರ್ಜಿಗಳ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ, ಅವರು ಬಿಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯೇ, ಇಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ : ಇದರ ವಿಚಾರದಲ್ಲಿ ಈಗಾಗಲೇ ಅಮೆಂಡ್‌ಮೆಂಟ್ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದಲ್ಲಿ ನಾನೂ ಕೂಡ ಸೆಂಟ್ರಲ್ ಜೈಲಿಗೆ ಹೋಗಿ ಬಂದಿದ್ದೇನೆ. ಖೈದಿಗಳ ಹತ್ತಿರ ಮಾತಿನಾಡಿದ್ದೇನೆ, ಅಲ್ಲಿ ಏನಾಗಿದೆ ಎಂದರೆ, ಖೈದಿಗಳಿಗೆ ವಯಸ್ಸಾಗಿ, ಕಣ್ಣು ಕಾಣದೆ, ಕಾಲು ಹೋಗಿರುವವರೂ ಇದ್ದಾರೆ. ನಾನು ಅವರನ್ನು ನೋಡಿ, ಕೆಲವರನ್ನು ಬಿಡುಗಡೆ ಮಾಡಬೇಕು, ಅಂಬೇಡ್ಕರ್ ಜನ್ಮಶತಾಬ್ದಿಗೆ ಸಂಬಂಧಪಟ್ಟ ಹಾಗೆ ಎನ್ನತಕ್ಕಂತಾದ್ದನ್ನು ವಿಚಾರ ಮಾಡಿ, ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮುಂಚೆ ಇರುವ ಕಾನೂನು ಪ್ರಕಾರ, ಆ ತಾರೀಖಿನೊಳಗೆ ಬರುವವರನ್ನು ಮಾತ್ರ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಯಿತು. ನಾವು ಕಾರ್ಯಕ್ರಮ ಹಾಕಿದ್ದೇವೆ. 11 ಜನರನ್ನು ಈಗಾಗಲೇ ಮಾನ್ಯ ಸಚಿವರು ಹೇಳಿರುವಂತೆ ಬಿಡುಗಡೆ ಮಾಡಿದ್ದೇವೆ. ಉಳಿದಿರತಕ್ಕಂಥವರು ಏನಿದ್ದಾರೆ, ಅತಿ ವಯಸ್ಸಾಗಿ, ನೋಡಿದರೆ ಬೇಜಾರಾಗುತ್ತದೆ. ಕಾನೂನು ಪ್ರಕಾರ ಅವರನ್ನು ತಡೆದಿರಬಹುದು, ಶಿಕ್ಷೆ ಕೊಟ್ಟಿರಬಹುದು. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಇಲ್ಲ. ಇದರ ಬಗ್ಗೆ ಏನಾದರೊಂದು ತೀರ್ಮಾನ ಮಾಡಿ ಎಂದು ಇಂಡಿಯಾ ಸರ್ಕಾರಕ್ಕೆ ಬರೆದಿದ್ದೇವೆ, ಇಲ್ಲದೆ ಹೋದರೆ ರಾಜ್ಯಸರ್ಕಾರಕ್ಕೆ ಪವರ್ಸ್ ಬರುವುದಿಲ್ಲವೆಂದು ಹೇಳಿದ್ದೇವೆ. ಅವರಿಂದ ಇನ್ನೂ ಏನೂ ಬಂದಿಲ್ಲ. ಬಂದಕೂಡಲೇ ನಾವು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ನಗರಾಭಿವೃದ್ಧಿ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು

2673 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದ ನಗರಾಭಿವೃದ್ಧಿ ಯೋಜನೆಗಳಿಗೆ ಅದರಲ್ಲೂ ಸಾರಿಗೆ, ನೀರು ಸರಬರಾಜು ಮತ್ತು ಕೊಳಚೆ ನಿರ್ಮೂಲನಾ ಕಾರ್ಯಕ್ರಮಗಳಿಗಾಗಿ ಸುಮಾರು 600 ಕೋಟಿ ರೂ.ಗಳ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ವಿಷಯದಲ್ಲಿ ತೆಗೆದುಕೊಂಡ ತೀರ್ಮಾನವೇನು ?

ಇ) ಇತರೆ ರಾಜ್ಯ ಸರ್ಕಾರಗಳು ಈ ನೆರವು ಪಡೆಯುತ್ತಿರುವಾಗ್ಗೆ, ಸರ್ಕಾರಕ್ಕೆ ಈ ನೆರವು ಪಡೆಯುವ ಇಚ್ಛೆ ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :